
ಸಂಪಾದಕೀಯ

# ಸಂಕೇತಗಳ ಅರ್ಥ ಹಾಗೂ ಮಹತ್ವ

ನಮ್ಮ ಬದುಕಿನಲ್ಲಿ ನಮಗರಿವಿಲ್ಲದೆಯೇ ನಾವು ಅನೇಕ ಸಂಕೇತಗಳನ್ನು ಬಳಸುತ್ತೇವೆ. ಆದರೆ ಅವು ಸಂಕೇತಗಳೆಂದೂ, ಅವುಗಳ ಅರ್ಥ ಇದೆಂದೂ ನಮ್ಮ ಅರಿವಿಗೆ ಬರುವುದಿಲ್ಲ. ಎಲ್ಲವನ್ನೂ ಸಹಜವಾಗಿ ಗ್ರಹಿಸುತ್ತೇವೆ; ನಮ್ಮ ನಮ್ಮ ಕೆಲಸ ಕಾರ್ಯಗಳಲ್ಲಿ ಮುಳುಗಿಹೋಗುತ್ತೇವೆ. ರಸ್ತೆ ನಿಯಮಗಳನ್ನು ಹೇಳುವ ಸೂಚನಾಫಲಕಗಳು, ಆಸ್ಪತ್ರೆಯನ್ನು ಸೂಚಿಸುವ ಫಲಕಗಳು, 'ರೈಲು ಬರುತ್ತಿದೆ, ಹಳಿ ದಾಟಬೇಡಿ' ಎಂದು ಸಾರುವ ಕೆಂಪು ದೀಪ, 'ಈ ಜಾಗದಲ್ಲಿ ಧೂಮಪಾನ ನಿಷೇಧಿಸಲಾಗಿದೆ' ಎಂದು ಸೂಚಿಸುವ ಚಿತ್ರ — ಇವೆಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಕಂಡುಬರುವ ಸಂಕೇತಗಳು. ಇನ್ನು ಮುತ್ತೈದೆಯರು ತೊಡುವ ಮಾಂಗಲ್ಯ, ಕಾಲುಂಗುರ, ಕುಂಕುಮ ಇತ್ಯಾದಿಗಳು 'ಇನ್ನೂ ಪತಿ ಬದುಕಿದ್ದಾನೆ' ಎಂದು ಹೇಳುತ್ತವೆ. ವಿವಿಧ ಧಾರ್ಮಿಕ ಪಂಥಗಳ ಅಡ್ಡನಾಮ, ಉದ್ದನಾಮ, ವಿಭೂತಿ ಇತ್ಯಾದಿಗಳು ಆಯಾ ಧಾರ್ಮಿಕ ಶ್ರದ್ಧೆಯ ಸಂಕೇತಗಳು. ವಿವಿಧ ಧರ್ಮಗಳನ್ನು ಸಂಕೇತಿಸುವ ಚಿಹ್ನೆಗಳೂ ಇವೆ — ಶಿಲುಬೆ, ಅರ್ಧ ಚಂದ್ರ ಹಾಗೂ ನಕ್ಷತ್ರ, ಓಂಕಾರ ಇತ್ಯಾದಿ. ಈ ಸಂಕೇತಗಳ ಬಳಕೆ ಮಾನವ ಜೀವನದಲ್ಲಿ ಹತ್ತುಹಲವು ಸಂದರ್ಭಗಳಲ್ಲಿ, ಅನೇಕ ಅರ್ಥಗಳಲ್ಲಿ ಬಳಕೆಯಾಗುವುದನ್ನು ಕಾಣುತ್ತೇವೆ. ಇವುಗಳ ಬಗ್ಗೆ ನಾವು ಪ್ರಶ್ನೆ ಹಾಕಿಕೊಂಡರೆ, ಇವುಗಳ ವಿಷಯವಾಗಿ ಅನೇಕ ಸಂಗತಿಗಳನ್ನು ಅರಿತುಕೊಳ್ಳಬಹುದು: ಸಂಕೇತಗಳ ಅಗತ್ಯವೇನು? ಅವುಗಳನ್ನು ಯಾರು ಸೃಷ್ಟಿಸಿದರು? ಅವುಗಳು ನೀಡುವ ಅರ್ಥವೇನು? ಈ ಸಂಕೇತಗಳನ್ನು ಸರಿಯಾಗಿ ಅರ್ಥೈಸಲಾಗುತ್ತಿದೆಯೆ? ಈ ಕುರಿತು ಗೊಂದಲಗಳಿಗೆ ಕಾರಣವೇನು? ಸಂಕೇತಗಳನ್ನು ಸರಿಯಾಗಿ ಅರಿತುಕೊಂಡು ಬಳಸುವುದು ಹೇಗೆ?

## ವಿವಿಧ ಸಂದರ್ಭಗಳಲ್ಲಿ

ಸಂಕೇತಗಳ ಬಳಕೆ ಜೀವನದ ವಿವಿಧ ಸಂದರ್ಭಗಳಲ್ಲಿ ಆಗುವುದರಿಂದ, ಅವುಗಳನ್ನು ಒಂದೇ ರೀತಿ ಅರಿತುಕೊಳ್ಳಲು, ಬಳಸಲು ಸಾಧ್ಯವಾಗುವುದಿಲ್ಲ. ಆಯಾ ಸಂದರ್ಭ, ಸನ್ನಿವೇಶಗಳು ರಚಿಸುವ ಸಂಕೇತಗಳನ್ನು ಆ ಸಂದರ್ಭಗಳಲ್ಲೇ ಅರಿತುಕೊಳ್ಳಬೇಕಾಗುವುದು. ಅತ್ಯಂತ ಸರಳವಾದ ಸನ್ನೆ, ಸಂಕೇತ, ಗುರುತುಗಳನ್ನು ಮಾನವನು ಎಲ್ಲ ದೇಶ, ಸಮಾಜ, ಸನ್ನಿವೇಶಗಳಲ್ಲಿ ಸಮಾನವಾಗಿ ಬಳಸುತ್ತಾನೆ. ಉದಾಹರಣೆಗೆ, 'ಬೇಡ', 'ಸಾಕು', 'ನಿಲ್ಲಿಸು', 'ಇತ್ತ ಬಾ' ಮುಂತಾದವನ್ನು ತಿಳಿಸುವ ಆಂಗಿಕ ಸಂಜ್ಞೆಗಳು. ಆದರೆ ಭಾಷೆ? ಒಂದೊಂದು ಭಾಷೆಯೂ ಶಾಬ್ದಿಕ ಸಂಕೇತಗಳ ವ್ಯವಸ್ಥಿತವಾದ ಬಳಕೆ. ಇವು ದೇಶ-ದೇಶಗಳಲ್ಲಿ, ಪ್ರಾಂತೀಯ-ಜನಾಂಗೀಯ ನೆಲೆಗಳಲ್ಲಿ ಭಿನ್ನವಾಗಿವೆ.



ಭಾಷೆಗಳನ್ನು ಬಳಸುವುದರಲ್ಲಿ ಸಮಾಜ ಜೀವನ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಇತ್ತೀಚೆಗೆ ಮೊಬೈಲ್, ಇಂಟರ್‌ನೆಟ್ ಮುಂತಾದವುಗಳ ಬಳಕೆ ಹೆಚ್ಚಿದಂತೆ, ಅಲ್ಲಿ ಸಂಕೇತಗಳನ್ನು ವಿಭಿನ್ನ ಬಗೆಗಳಲ್ಲಿ ಬಳಸಲಾಗುತ್ತದೆ. ಆದರೆ ಇವೆಲ್ಲ ಹೆಚ್ಚು ಗೊಂದಲಗಳನ್ನು ಸೃಷ್ಟಿಸುವುದಿಲ್ಲ; ಬದಲಾಗಿ ವಿಷಯಗಳನ್ನು ದಾಟಿಸುವಲ್ಲಿ ಹೆಚ್ಚು ಸುಲಭವೂ ಪರಿಣಾಮಕಾರಿಯೂ ಆದ ಮಾಧ್ಯಮಗಳಾಗಿವೆ. ಆದರೆ ಎಲ್ಲ ಸಮಸ್ಯೆಗಳೂ ಹುಟ್ಟಿಕೊಳ್ಳುವುದೂ ಅಮೂರ್ತ ವಿಷಯಗಳನ್ನು ಸೂಚಿಸುವ ಸಂಕೇತಗಳಲ್ಲಿ. ಧಾರ್ಮಿಕ-ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ, ಸಂಕೇತಗಳು ಬಹಳ ಮುಖ್ಯವಾದ ಪಾತ್ರ ವಹಿಸುತ್ತವೆ. ಆದ್ದರಿಂದ ಇಂಥ ವಿಶಿಷ್ಟ ಸಂಕೇತಗಳ ಬಗ್ಗೆ ಹೆಚ್ಚು ಚಿಂತಿಸಿ, ಸರಿಯಾದ ಅರ್ಥವನ್ನು ಗ್ರಹಿಸುವುದು ಅತ್ಯಗತ್ಯ.

## ಸಂಕೇತಗಳ ಅಗತ್ಯವೇನು?

ಈಗಾಗಲೇ ನೋಡಿರುವಂತೆ, ವಿವಿಧ ಸಂದರ್ಭಗಳಲ್ಲಿ ಸಂಕೇತಗಳನ್ನು ನಾವು ಬಳಸುವುದರಿಂದ, ಅವುಗಳಲ್ಲಿ ಭಿನ್ನತೆಯಿದೆ. ಅದೇ ರೀತಿ, ಅವುಗಳ ಅಗತ್ಯವೂ ಒಂದಕ್ಕಿಂತ ಒಂದು ಭಿನ್ನ. ಹೀಗೆ ನೋಡುವಾಗ, ಮೂರು ಬಗೆಯಲ್ಲಿ ಈ ಸಂಕೇತಗಳ ಬಳಕೆ ಲಾಭದಾಯಕವಾಗಿವೆ:

೧) **ಸಂವಹನ ಸುಲಭವಾಗುತ್ತದೆ:** ಕೆಲವು ಸಂದರ್ಭಗಳಲ್ಲಿ ಹೆಚ್ಚು ವಿವರಣೆಗಳನ್ನು ನೀಡುವುದು ಸಾಧ್ಯವಾಗದೆ ಹೋದಾಗ, ಸಂಕೇತಗಳ ಬಳಕೆ ಅದನ್ನು ಸುಲಭವಾಗಿಸಿಕೊಡುತ್ತದೆ. ಉದಾಹರಣೆಗೆ, ಇನ್ನೂ ಡ್ರೈವಿಂಗ್ ಕಲಿಯುವವರು ಬಳಸುವ 'L'

ಬೋರ್ಡ್. ರಸ್ತೆಯಲ್ಲಿ ಎದುರಾಗುವ ವಾಹನಗಳು, ಪಾದಚಾರಿಗಳು ಈ ಚಿಹ್ನೆಯನ್ನು ನೋಡಿದೊಡನೆ ಜಾಗರೂಕತೆ ವಹಿಸುತ್ತಾರೆ. ಡ್ರೈವ್ ಮಾಡುವವನು ಎದುರಾಗುವ ವಾಹನಗಳ ಮುಂದೆ ತಡವರಿಸಿದಾಗ, 'ನೋಡಪ್ಪ, ನಾನಿನ್ನೂ ಡ್ರೈವಿಂಗ್ ಕಲಿಯುತ್ತಿದ್ದೇನೆ' ಎಂದು ವಿವರಿಸಿ ಹೇಳುವುದು ಎಷ್ಟೊಂದು ಪ್ರಯಾಸದ ಕೆಲಸ! (ಅಷ್ಟರಲ್ಲಿ ದುರ್ಘಟನೆ ನಡೆದಿದ್ದರೂ ನಡೆದಿದ್ದೀತು!) ಇದೇ ರೀತಿ ಮನೆಯ ಮುಂದಿರುವ ನಾಯಿಯ ಚಿಹ್ನೆ, ರಸ್ತೆ ದಾಟುವ ಶಾಲಾಮಕ್ಕಳ ಬೋರ್ಡ್, ಟ್ರಾಫಿಕ್ ಸಿಗ್ನಲ್ ಇತ್ಯಾದಿಗಳೆಲ್ಲ ಸಂವಹನದ ಸಮಸ್ಯೆಯನ್ನು ನಿವಾರಿಸುತ್ತವೆ.

**೨) ವಿಷಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಬಹುದು:** ಕೆಲವೊಮ್ಮೆ ಸಂಕೇತಗಳು ಹೇಳಬೇಕಾದ ವಿಷಯವನ್ನು ಮಾತಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ತಿಳಿಸಿಕೊಡುತ್ತವೆ. ಇದಕ್ಕೆ ಉತ್ತಮ ಉದಾಹರಣೆ : ಕರೆಗಂಟೆ. ಆಫೀಸುಗಳಲ್ಲಿ, ಪರೀಕ್ಷಾ ಭವನದಲ್ಲಿ ಸ್ಪರ್ಧೆಗಳಲ್ಲಿ ಇದನ್ನು ಬಳಸುತ್ತೇವೆ. ಮಾತಿನ ಮೂಲಕ ಯಾರನ್ನಾದರೂ ಕರೆಯುವುದಕ್ಕಿಂತ ಎಷ್ಟೊಂದು ಶೀಘ್ರವಾಗಿ, ತುರ್ತಾಗಿ ಹಾಗೂ ಪರಿಣಾಮಕಾರಿಯಾಗಿ ಈ ಮೂಲಕ ಕರೆಯಬಹುದು? ಮಾತಿನ ಮೂಲಕ ಕರೆಯುವಾಗ, 'ಸ್ವಲ್ಪ, ಈ ಕಡೆ ಬಾರಪ್ಪಾ' ಅಥವಾ 'ಸಮಯವಾಯಿತು ಬರೆಯುವುದನ್ನು ನಿಲ್ಲಿಸಿ'- ಹೀಗೆ ಹೆಚ್ಚು ಹೊತ್ತು ವ್ಯಯಮಾಡಬೇಕು. ಹೇಳುವವನು ಆಲೋಚಿಸಬೇಕು, ಮತ್ತೆ ಹೇಳಬೇಕು. ಕೇಳುವವನೂ ಅದನ್ನು ಕೇಳಿ, ಅರ್ಥೈಸಿಕೊಂಡು ಪ್ರತಿಕ್ರಿಯೆ ನೀಡಬೇಕು. ಕರೆಗಂಟೆ ನೇರ ಕಿವಿಗೆ ತಗಲುತ್ತದೆ. ಕೇಳಿದವನನ್ನು ಕ್ರಿಯೆಗೆ ಪ್ರಚೋದಿಸುತ್ತದೆ. ಹೀಗೆ ಸಂಕೇತಗಳು ಹೆಚ್ಚು ಪರಿಣಾಮಕಾರಿ.

**೩) ಸ್ಪಷ್ಟವಾಗಿ ಅರ್ಥವಾಗದ, ಅಮೂರ್ತವಾದ, ಸೂಕ್ಷ್ಮ ವಿಚಾರಗಳನ್ನು ಸಂಕೇತವು ಅರ್ಥಮಾಡಿಸಬಲ್ಲುದು:** ಇವು ಹೆಚ್ಚಾಗಿ ಬಳಕೆಯಾಗುವುದು ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ವಲಯಗಳಲ್ಲಿ. ಆದರೂ ಜೀವನದ ಇತರ ಕ್ಷೇತ್ರಗಳಲ್ಲೂ ಇಂತಹ ಸಂಕೇತಗಳನ್ನು ಬಳಸುವುದಿದೆ. ಉದಾಹರಣೆಗೆ - ಕಪ್ಪುಪಟ್ಟಿ, ಪ್ರತಿಭಟನೆ, ವಿರೋಧ, ಶೋಕ, ಕರಾಳತೆ ಇವನ್ನೆಲ್ಲ ಅದು ಪ್ರತಿನಿಧಿಸುತ್ತದೆ. ಹೀಗಿದ್ದರೂ, ಅಮೂರ್ತ ಹಾಗೂ ಸೂಕ್ಷ್ಮ ಸಂಕೇತಗಳ ಬಳಕೆ ಧಾರ್ಮಿಕ ಕ್ಷೇತ್ರದಲ್ಲೇ ಅತ್ಯಧಿಕ. ಪೂಜೆ, ಹಬ್ಬ, ಆಚರಣೆ, ಸಂಸ್ಕಾರ, ದೇಗುಲ — ಇಲ್ಲೆಲ್ಲ ಸಂಕೇತಗಳ ಬಳಕೆ ವಿಪುಲವಾಗಿದೆ. ಆದರೆ, ಒಂದಂಶವನ್ನು ವಿಶೇಷವಾಗಿ ಗಮನಿಸಬೇಕು: ಅಮೂರ್ತ ಹಾಗೂ ಸೂಕ್ಷ್ಮ ಸಂಕೇತಗಳನ್ನು ಅರ್ಥೈಸುವುದು ಕಷ್ಟ; ಅದೇ ರೀತಿ ಅವು ಅಸ್ಪಷ್ಟವಾಗಿರುವುದರಿಂದ, ಅವುಗಳನ್ನು ಅರ್ಥೈಸುವಲ್ಲಿ ಅಭಿಪ್ರಾಯಭೇದಗಳೂ, ಗೊಂದಲಗಳೂ ಉಂಟಾಗುವ ಸಾಧ್ಯತೆಯಿದೆ. ಈ ದೃಷ್ಟಿಯಿಂದ ಧಾರ್ಮಿಕ ಸಂಕೇತಗಳ ವಿಷಯವಾಗಿ ಹೆಚ್ಚು ಚಿಂತಿಸುವ ಅಗತ್ಯವಿದೆ.

### ಧಾರ್ಮಿಕ ಸಂಕೇತಗಳು

ಯಾವುದೇ ಸಂಸ್ಕೃತಿಯ ಅಥವಾ ಧರ್ಮದ ತಿರುಳೇ ಆಧ್ಯಾತ್ಮಿಕತೆ. ಆಧ್ಯಾತ್ಮಿಕ ಅನುಭವಗಳೇ ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಗಳಿಗೆ ಆಧಾರವೆಂದು ಸ್ವಾಮಿ ವಿವೇಕಾನಂದರು ಬೋಧಿಸುತ್ತಾರೆ. ಲೌಕಿಕ ಪ್ರಪಂಚದ, ಅಥವಾ ಇಂದ್ರಿಯ ಗ್ರಾಹ್ಯ ಜಗತ್ತನ್ನು ಮೀರಿದ ಉನ್ನತ ಅನುಭವಗಳು ಆಧ್ಯಾತ್ಮಿಕ ತತ್ತ್ವಗಳನ್ನು ರೂಪಿಸಿವೆ. ಆದ ಕಾರಣ ಅಂಥ ಅನುಭವಗಳನ್ನು ಮಾತಿನ ಮೂಲಕ ವಿವರಿಸಲಾಗದು, ಇನ್ನೊಬ್ಬರಿಗೆ ವರ್ಣಿಸಲಾಗದು. ಹಾಗಿದ್ದರೆ, ಅಂಥ ಅನುಭವಗಳನ್ನು ಇತರರಿಗೆ ತಿಳಿಸಬೇಡವೆ? ಇತರರಿಗೂ ಅಂಥ ಅಲೌಕಿಕ ಅನುಭವವಾಗಬಾರದೆ? ಭಾರತದ ಮಹಾತ್ಮರ, ಸಾಧುಸಂತರ ಹೃದಯ ವಿಶಾಲವಾಗಿತ್ತು. ಅವರು ಆಧ್ಯಾತ್ಮಿಕತೆ ಇಡೀ ಮಾನವ ಜನಾಂಗದ ಸೊತ್ತು ಎಂದು ಭಾವಿಸಿದ್ದರು. ಅದಕ್ಕಾಗಿಯೇ ಅವರು ತಮ್ಮ ಅನುಭವಗಳನ್ನು ಎಲ್ಲರೂ ಪಡೆಯುವ ಮಾರ್ಗವನ್ನು ಕಂಡುಕೊಂಡರು. ಅದೇ ಧರ್ಮ, ಸಂಸ್ಕೃತಿಗಳ ಮೂಲಕ ಜನರನ್ನು ಭಗವಂತನೆಡೆಗೆ ಕರೆದೊಯ್ಯುವ ಸನಾತನ ಧರ್ಮ. ಇಲ್ಲಿ ಹತ್ತು ಹಲವು ಹಂತಗಳಲ್ಲಿರುವ, ಎಲ್ಲ ವರ್ಗಗಳ, ಎಲ್ಲ ಬಗೆಯ ಮಾನಸಿಕ ಸಿದ್ಧತೆಗಳ ಜನರಿಗೂ ಮಾರ್ಗವಿದೆ. ತಾತ್ತ್ವಿಕ ಚಿಂತನ-ಮಂಥನ ನಡೆಸುವ ಮೂಲಕ, ಧ್ಯಾನ-ಧಾರಣ-ಸಮಾಧಿಗಳ ಮೂಲಕ ಭಗವಂತನನ್ನು ಕಂಡುಕೊಳ್ಳಬಲ್ಲ ಉನ್ನತ ಹಂತದವರೂ ಇಲ್ಲಿ ಬರುತ್ತಾರೆ; ತಮ್ಮ ತಮ್ಮ ಸಾಂಸಾರಿಕ, ಔದ್ಯೋಗಿಕ ಕರ್ತವ್ಯಗಳನ್ನು ನಿರ್ವಹಿಸುತ್ತ ಭಗವಂತನನ್ನು ಭಕ್ತಿ, ಉಪಾಸನೆಗಳ ಮೂಲಕ ಸಮೀಪಿಸುವವರೂ ಇದ್ದಾರೆ; ಹತ್ತು ಹಲವು ಆಚರಣೆಗಳ ಮೂಲಕ ತಮ್ಮ ತಿಳಿವಿಗೆ ನಿಲುಕುವಂತೆ ಧರ್ಮವನ್ನು ಆಚರಿಸುತ್ತ, ಭಗವಂತನ ಹತ್ತಿರಕ್ಕೆ ತಮ್ಮದೇ ರೀತಿಯಲ್ಲಿ ಸಾಗುವ ಸಾಮಾನ್ಯ ಜನರೂ ಇಲ್ಲಿದ್ದಾರೆ.

ಈ ಎಲ್ಲ ವೈವಿಧ್ಯಮಯ ಮಾರ್ಗಗಳಿಗೆ ಅನುಗುಣವಾಗುವಂತೆ ವಿವಿಧ ಧಾರ್ಮಿಕ ಸಂಕೇತಗಳನ್ನು ರೂಪಿಸಿಕೊಂಡದ್ದನ್ನು ಹಿಂದೂಧರ್ಮದಲ್ಲಿ ನಾವು ಕಾಣುತ್ತೇವೆ. ವೇದ-ವೇದಾಂತಗಳ ಹಿನ್ನೆಲೆಯಲ್ಲಿ ಮೂಡಿಬಂದ ಓಂಕಾರ ಒಂದು ಅತ್ಯುತ್ಕೃಷ್ಟವಾದ ಸಂಕೇತವಾಗಿದೆ. ಅದು ಯಾವ ಬಗೆಯ ಅರ್ಥವನ್ನು ನೀಡುವುದು? ಅಥವಾ ಏನನ್ನು ಪ್ರತಿನಿಧಿಸುವುದು?-ಓಂಕಾರವು ಭಗವಂತನ ಸಂಕೇತ; ಅಷ್ಟೇ ಅಲ್ಲ, ಅದು ಸಾಕ್ಷಾತ್ ಭಗವಂತನೇ ಆಗಿದೆ. ಭೂಃ, ಭುವಃ, ಸ್ವಃ - ಈ ಮೂರು ಲೋಕಗಳನ್ನು ಇದು ಸಂಕೇತಿಸುವಂತೆ; ಜಾಗ್ರತ್, ಸ್ವಪ್ನ, ಸುಷುಪ್ತಿ ಮೂರೂ ಅವಸ್ಥೆಗಳನ್ನೂ, ಅದರಾಚಿನ 'ತುರೀಯ' ಎಂಬ ಅವಸ್ಥೆಯನ್ನೂ ಅದು ಪ್ರತಿನಿಧಿಸುತ್ತದೆ. ಅಷ್ಟೇ ಅಲ್ಲದೆ, ಅದು ಅಕ್ಷರವೂ ಹೌದು, ಧ್ವನಿಯೂ ಹೌದು. ಸೂಚ್ಯ-ಸೂಚಕವೆರಡರ ಸಂಗಮವಾಗಿರುವ 'ಸೇತುವೆ'ಯೂ ಹೌದು. ವ್ಯಕ್ತ-ಅವ್ಯಕ್ತಗಳನ್ನು ಸಾಧಿಸುವ, ಮೂರ್ತ-ಅಮೂರ್ತಗಳನ್ನು ಬೆಸೆಯುವ, ಹಾಗೂ

ಸ್ಥೂಲ-ಸೂಕ್ಷ್ಮಗಳನ್ನು ಒಂದಾಗಿಸುವ ಸೇತುವೆ ಅದು. ಆದ್ದರಿಂದಲೇ ಓಂಕಾರವನ್ನು 'ಅತ್ಯುತ್ಕೃಷ್ಟವಾದ ಅವಲಂಬನೆ', 'ಅತಿ ಶ್ರೇಷ್ಠವಾದ ಸಂಕೇತ' ಎನ್ನಲಾಗಿದೆ. ಈ ಕಾರಣದಿಂದಲೇ ಓಂಕಾರವನ್ನು ವಿಶ್ವವ್ಯಾಪಕವಾದ, ಎಲ್ಲ ಸಾಧನೆ-ಅನುಷ್ಠಾನಗಳಲ್ಲೂ ಬಳಸುವ ಸಂಕೇತವೆನ್ನಲಾಗಿದೆ. ಇದೇ ರೀತಿ ಅಗ್ನಿ, ಶಂಖ, ಚಕ್ರ, ಶಿವಲಿಂಗ, ತ್ರಿಶೂಲ, ಭಸ್ಮ, ನಾಮ ಮುಂತಾದ ಹತ್ತು ಹಲವು ಸಂಕೇತಗಳೂ ನಮ್ಮಲ್ಲಿದೆ.

## ಧಾರ್ಮಿಕ ಆಚರಣೆಗಳಲ್ಲಿ

ಭಗವಂತನ ಆರಾಧನೆ, ಪೂಜೆ, ಉಪಾಸನೆಗಳಲ್ಲಿ ಬಳಕೆಯಾಗುವ ಸಂಕೇತಗಳಲ್ಲಿ ಪ್ರಮುಖವಾದುದೇ ದೇವರ ಪ್ರತಿಮೆಗಳು. ವೇದಕಾಲದಿಂದಲೇ ಸಾಕಾರ, ನಿರಾಕಾರ, ಸಗುಣ-ನಿರ್ಗುಣ ಉಪಾಸನೆಯ ಪದ್ಧತಿಗಳು ನಮ್ಮಲ್ಲಿದ್ದವು. ಇವು ವಿವಿಧ ಹಂತಗಳಲ್ಲಿರುವ, ವಿವಿಧ ಹಂತದ ಸಾಧಕರಿಗೆ ತಕ್ಕ ರೀತಿಯಲ್ಲಿ ಹಲವು ಬಗೆಯ ಸಾಧನೆಯ ಕ್ರಮಗಳನ್ನು ರೂಪಿಸಿವೆ. ನಿರಾಕಾರ, ನಿರ್ಗುಣ ಉಪಾಸನೆ ಕೆಲವು ಮಂದಿಗೆ ಮಾತ್ರ ಸಾಧ್ಯವಾಗಬಹುದು; ಅವರಿಗೆ ಪ್ರತಿಮೆಯ ಅಗತ್ಯವೇ ಇಲ್ಲದಿರಬಹುದು. ಎಲ್ಲಾದರೂ, ಹೇಗಾದರೂ ನಿರ್ಗುಣ ನಿರಾಕಾರ ಬ್ರಹ್ಮನ ಧ್ಯಾನ ಮಾಡಲು ಅವರಿಗೆ ಸಾಧ್ಯ. ಆದರೆ ಇದು ಸಾಧ್ಯವಿಲ್ಲದ ಜನರ ಸಂಖ್ಯೆಯೇ ಅಧಿಕ. ಕಣ್ಣಿಗೆ ಕಾಣದ, ಗ್ರಹಿಕೆಗೆ ನಿಲುಕದ ಪರಮಾತ್ಮನನ್ನು ಒಂದು ಪ್ರತಿಮೆಯ, ಚಿತ್ರದ, ನಾಮ-ರೂಪಗಳ ಮೂಲಕ ಗ್ರಹಿಸಿ ಆರಾಧಿಸುವುದು ಅವರಿಗೆ ಸಾಧ್ಯ. ಅವರಿಗಾಗಿ ಅಸಂಖ್ಯಾತ ದೇವತಾಮೂರ್ತಿಗಳು, ಅವರ ನಾಮ ಜಪ (ಇದೂ ಸಂಕೇತವೇ), ಅದನ್ನನುಸರಿಸಿ ಹಲವು ಬಗೆಯ ಪೂಜಾಪದ್ಧತಿ ಇವೆಲ್ಲ ಹೊರಟಿವೆ. ನಮ್ಮ ಪೂಜಾವಿಧಾನದಲ್ಲಂತೂ ಆದಿಯಿಂದ ಅಂತ್ಯದವರೆಗೂ ಸಂಕೇತಗಳು ಹಾಸುಹೊಕ್ಕಾಗಿವೆ. ಮೂಲವಿಗ್ರಹವೇ ಸಂಕೇತ. ಅರ್ಚನೆ-ಮಂತ್ರ-ಮುದ್ರೆ-ಇವೆಲ್ಲವೂ ಸಂಕೇತ. ಇವೆಲ್ಲದರ ಮೂಲ ಉದ್ದೇಶ, ನಮ್ಮ ಹೃದಯದಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಶ್ರದ್ಧೆ, ವ್ಯಾಕುಲತೆ ಇಂತಹ ಗುಣಗಳನ್ನು ಬೆಳೆಸುವುದು. ಆದ್ದರಿಂದ ಎಲ್ಲ ಬಗೆಯ ಸಂಕೇತಗಳೂ ಅತ್ಯಂತ ಅಗತ್ಯವಾಗಿವೆ.

## ಸಂಕೇತಗಳನ್ನು ಸರಿಯಾಗಿ ಅರಿತುಕೊಳ್ಳುವ ಆವಶ್ಯಕತೆ

ಧಾರ್ಮಿಕ ಸಂಕೇತಗಳಲ್ಲಿ ಗೊಂದಲವಿರುವುದು ಅವುಗಳ ಸ್ಪಷ್ಟವಾದ ಅರ್ಥವೇನು ಎಂದು ಅರಿತುಕೊಳ್ಳುವುದಲ್ಲಿ ಮಾತ್ರ. ಇಲ್ಲಿ ನಾವು ಶಾಸ್ತ್ರಗ್ರಂಥಗಳು, ಹಾಗೂ ಆಧ್ಯಾತ್ಮಿಕ ಮಹಾಪುರುಷರ ನುಡಿಗಳನ್ನು ಅನುಸರಿಸುವುದು ಸೂಕ್ತ. ಹಲವು ಬಾರಿ ಕೇವಲ ಸಂಪ್ರದಾಯವನ್ನು ಅನುಸರಿಸುವುದರಿಂದ, ಸಂಕೇತಗಳ ಸರಿಯಾದ ಅರ್ಥವನ್ನು ಅವು ತಿಳಿಸಿಕೊಡಲಾರವು; ಅನೇಕ ಬಾರಿ ಅವು ದಾರಿ ತಪ್ಪಿಸುತ್ತವೆ ಕೂಡ. ಆದ್ದರಿಂದ ಇಲ್ಲೂ ನಾವು 'ಶಾಸ್ತ್ರಸ್ಯ ಗುರುವಾಕ್ಯಸ್ಯ' ಎಂಬ ಮಾತನ್ನು ಅನುಸರಿಸುವುದು ಒಳಿತು.

ಸಂಕೇತಗಳ ವಿಶ್ಲೇಷಣೆ, ವಿವರಣೆ ನೀಡುವವರು ಅವುಗಳ ಹಿಂದಿರುವ ಅರ್ಥವನ್ನು ಸ್ಪಷ್ಟವಾಗಿ ಅರಿತಿರಬೇಕು. ಅವರು ನೀಡುವ ವಿವರಣೆಗಳು ಜನಸಾಮಾನ್ಯರಿಗೆ ಸಂಕೇತಗಳ ಅರ್ಥವನ್ನರಿಯಲು ಸಹಕಾರಿಯಾಗುವುವು. ಅಸ್ಪಷ್ಟತೆ, ಗೊಂದಲ, ಭಿನ್ನಾಭಿಪ್ರಾಯಗಳು ಕಡಿಮೆಯಾದಷ್ಟೂ ಸಂಕೇತಗಳು ಹೆಚ್ಚು ಜನಪ್ರಿಯವಾಗುವುವು ಹಾಗೂ ಅವುಗಳ ಬಳಕೆಯಿಂದ ಜನರ ಜೀವನ ಸಮೃದ್ಧಗೊಳ್ಳುವುದು. ಇದಕ್ಕೆ ಒಂದು ಒಳ್ಳೆಯ ಉದಾಹರಣೆ, ನಮಸ್ಕರಿಸುವುದು. ನಮ್ಮ ದೇಶದಲ್ಲಿ ಗುರುಹಿರಿಯರಿಗೆ, ಮಹಾತ್ಮರಿಗೆ, ಸಾಧುಸಂತರಿಗೆ ನಮಸ್ಕರಿಸುವುದು ಹಳೆಯ ಸಂಪ್ರದಾಯ. ಭಕ್ತಿ, ಗೌರವ ಸಲ್ಲಿಸುವುದು, ಇತರರನ್ನು ಭೇಟಿಯಾದಾಗ ಅಭಿವಾದನ ಸಲ್ಲಿಸುವುದು ವ್ಯಕ್ತಿಯ ಸಂಸ್ಕಾರ; ಆತ ರೂಢಿಸಿಕೊಂಡ ಸಂಸ್ಕೃತಿಯ ಪ್ರತೀಕ. ನಮಸ್ಕಾರ ಮಾಡುವವನು ತನ್ನ ಅಹಮಿಕೆಯನ್ನು ಕುಗ್ಗಿಸಿ, ವಿನಯವನ್ನು ತೋರಿಸುತ್ತಾನೆ. ಈ ಅರ್ಥವನ್ನರಿತು ನಮಸ್ಕಾರ ಮಾಡುವುದೇ ಯೋಗ್ಯ.

ಆಧುನಿಕ ವಿಚಾರವಾದಿಗಳು ಹಿಂದೂಧರ್ಮದ ಹಲವು ಸಂಕೇತಗಳನ್ನು ನಿಕೃಷ್ಟ ದೃಷ್ಟಿಯಿಂದ ವಿಶ್ಲೇಷಣೆ ಮಾಡಿ 'ಮನೋವೈಜ್ಞಾನಿಕ' 'ಸಮಾಜೋ-ಮನೋವೈಜ್ಞಾನಿಕ' ರೀತಿಯ ವಿವರಣೆಯಿದು ಎಂದು ಹೇಳಿಕೊಂಡದ್ದಿದೆ. ಶಿವಲಿಂಗ, ಯೋನಿ, ಪ್ರಕೃತಿ-ಪುರುಷ ಮುಂತಾದ ತತ್ತ್ವಗಳು ಲೈಂಗಿಕತೆಯೇ ಮುಂತಾದ ಮಾನವನ ಮೂಲಪ್ರವೃತ್ತಿಗಳ ಸಂಕೇತವೆಂದು ಬಿಂಬಿಸುವ ಪ್ರಯತ್ನಗಳೂ ನಡೆದಿವೆ. ತೀರ ಇತ್ತೀಚೆಗೆ, ನಮ್ಮಲ್ಲಿ ಬಳಕೆಯಾಗುವ ಸ್ವಸ್ತಿಕವನ್ನು (ನಾಜಿಗಳು ಬಳಸಿದ ಸಂಕೇತದಂತಿರುವ ಕಾರಣ) ನಿರಂಕುಶ ಪ್ರಭುತ್ವದ, ದಬ್ಬಾಳಿಕೆಯ ಸಂಕೇತವೆಂದು ತಪ್ಪಾಗಿ ಅರ್ಥೈಸಿದ ಉದಾಹರಣೆಯೂ ಇದೆ. ವಿವಾದಗಳನ್ನು ಸೃಷ್ಟಿಸುವುದೇ ಕೆಲವು ಮಂದಿ ಆಧುನಿಕರ ಕಾರ್ಯತಂತ್ರವಾಗಿದೆ. ಈ ಮೂಲಕ ಪ್ರಚಾರ, ಜನಪ್ರಿಯತೆ ಲಭಿಸುತ್ತದೆ ಎಂಬ ಭ್ರಮೆ ಅವರದು. ಕಾಲಕ್ರಮದಲ್ಲಿ ಇತಿಹಾಸದ ಒರೆಗಲ್ಲಿನಲ್ಲಿ ಅಚ್ಚಳಿಯದೆ ಉಳಿಯುವುದು ಸತ್ಯವೊಂದೇ ಎಂಬುದನ್ನು ಅವರು ಅರಿಯಲಾರರು, ಪಾಪ! ನಮ್ಮ ಧರ್ಮ, ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆ ರೂಪಿಸಿರುವ ಅತ್ಯಂತ ವ್ಯಾಪಕವಾದ ಸಂಕೇತಗಳು ಸಹಸ್ರಾರು ವರ್ಷಗಳಿಂದ ಇಂತಹ ವೈಚಾರಿಕ ಹೊಡೆತಗಳನ್ನು ಎದುರಿಸಿ ನಿಂತಿವೆ; ನಮ್ಮ ಸಮಾಜದ ಜನಜೀವನದಲ್ಲಿ ಅವು ಹಾಸುಹೊಕ್ಕಾಗಿವೆ. ಅವುಗಳು ಸನಾತನ ಸತ್ಯಗಳನ್ನು ಅವಲಂಬಿಸಿಕೊಂಡು ನಿಂತಿವೆ; ಆದ್ದರಿಂದ ಅವುಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿ, ಜೀವನದಲ್ಲಿ ಅನುಷ್ಠಾನಗೊಳಿಸುವುದೇ ಅತ್ಯಂತ ಸಮಂಜಸವಾದ ಜೀವನಧರ್ಮವೆನಿಸುವುದು. ❁

### ಏಪ್ರಿಲ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೦ | ಭಾನುವಾರ | ಶ್ರೀರಾಮನವಮಿ |
| ೧೨ | ಮಂಗಳವಾರ | ಏಕಾದಶಿ |
| ೨೬ | ಮಂಗಳವಾರ | ಏಕಾದಶಿ |